# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2236
ಸದಸ್ಯರ ಹೆಸರು : ಶ್ರೀ ಆರ್.ಬಿ. ತಿಮ್ಮಾಪೂರ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 18.03.2022.
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಗೆಂಡ್ಲ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಬೆಟ್ಟದ ಕೂರ್ಲಿ ಗ್ರಾಮದಲ್ಲಿ (ರೂದ್ರಭೂಮಿ) ಸ್ಮಶಾನ ಜಾಗ ಕಾಯ್ದಿರಿಸಲಾಗಿದೆಯೇ; ಕಾಯ್ದಿರಿಸಿದ್ದಲ್ಲಿ, ರುದ್ರಭೂಮಿಯ ಜಾಗದ ವಿಸ್ತೀರ್ಣವೆಷ್ಟು; (ದಾಖಲಾತಿ ಸಮೇತ ಮಾಹಿತಿ ನೀಡುವುದು) | ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಗೆಂಡ್ಲ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಬೆಟ್ಟದ ಕೂರ್ಲಿ ಗ್ರಾಮದ ಸ.ನಂ.143ರಲ್ಲಿ 3-00 ಎಕರೆ ಜಮೀನನ್ನು ಸ್ಮಶಾನದ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ: ಎಲ್ಎನ್ ಡಿ(2)ಎಸ್ಆರ್/68:99-2000, ದಿನಾಂಕ: 02.08.1999 ರಂತೆ ಕಾಯ್ದಿರಿಸಲಾಗಿರುತ್ತದೆ. ಅದರಂತೆ ಪಹಣಿಯಲ್ಲಿ ನಮೂದಿಸ ಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). |
| ಆ) | ಸದರಿ ರುದ್ರಭೂಮಿಯನ್ನು ಒತ್ತುವರಿ ಮಾಡಲಾಗಿದೆಯೇ; ಅಥವಾ ಗ್ರಾಮ ಪಂಚಾಯಿತಿಯ ವಶದಲ್ಲಿದೆಯೇ; (ವಿವರ ನೀಡುವುದು) | ಸ್ಮಶಾನಕ್ಕಾಗಿ ಕಾಯ್ದಿರಿಸಲಾದ ಜಮೀನಿನಲ್ಲಿ ಒತ್ತುವರಿಯಾಗಿರುವುದಿಲ್ಲ. ಸದರಿ ಜಮೀನು ಗೆಂಡ್ಲ ಗ್ರಾಮ ಪಂಚಾಯಿತಿ ವಶದಲ್ಲಿರುತ್ತದೆ. |
| ಇ) | ಸದರಿ ರುದ್ರಭೂಮಿಗೆ ತಂತಿಬೇಲಿ ಹಾಕಲಾಗಿದೆಯೇ; ಈ ರುದ್ರಭೂಮಿಯಲ್ಲಿ ನೀರಿನ ಸೌಲಭ್ಯವನ್ನು ಒದಗಿಸುವ ಸಲುವಾಗಿ ಕೊಳವೆ ಬಾವಿಯನ್ನು ಕೊರೆಸಲಾಗಿದೆಯೇ; ಇಲ್ಲದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಕೊಳವೆ ಬಾವಿ ಕೊರೆಸಲಾಗುವುದು; ಸರ್ಕಾರ ಗಮನಿಸಿದೆಯೇ; | ಪ್ರಸ್ತುತ, ಸ್ಮಶಾನ ಜಮೀನಿಗೆ ತಂತಿ ಬೇಲಿ ಹಾಕಿರುವುದಿಲ್ಲ ಹಾಗೂ ಕೊಳವೆ ಬಾವಿ ಕೊರೆಸಲಾಗಿರುವುದಿಲ್ಲ. ಸರ್ವೆ ಮಾಡಿ ಸದರಿ ಜಮೀನಿನ ಗಡಿ ಗುರುತಿಸಿ ಮೂಲ ಸೌಲಭ್ಯ ಒದಗಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗುವುದು. |
| ಈ) | ಸದರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇರುವ ಜಾಗವು ಎಷ್ಟಿದೆ; ಇದರ ಮಾಲೀಕರು ಯಾರು; ಈ ಜಾಗವು ಹಾಲಿ ಗ್ರಾಮ ಪಂಚಾಯಿತಿಗಳ ವಶದಲ್ಲಿದೆಯೇ? | ಬೆಟ್ಟದ ಕೂರ್ಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯು 19306 ಚದರ ಅಡಿ ವಿಸ್ತೀರ್ಣದಲ್ಲಿರುತ್ತದೆ. ಸದರಿ ಜಮೀನನ್ನು ಭೂದಾನವಾಗಿ ನೀಡಿದ್ದು, ಗೆಂಡ್ಲ ಗ್ರಾಮ ಪಂಚಾಯಿತಿಯ ಡಿಮಾಂಡ್ ರಿಜಿಸ್ಟರ್ ನಲ್ಲಿ ಖಾತೆ ಸಂಖ್ಯೆ 2/2ರಲ್ಲಿ ಶಾಲೆಯ ಹೆಸರಿನಲ್ಲಿ ದಾಖಲಿಸಲಾಗಿರುತ್ತದೆ ಹಾಗೂ ಗೆಂಡ್ಲ ಗ್ರಾಮ ಪಂಚಾಯಿತಿ ವಶದಲ್ಲಿರುತ್ತದೆ. |

ಸಂಖ್ಯೆ: ಆರ್‌ಡಿ 113 ಎಲ್‌ಜಿಕ್ಯೂ 2022

(ಆರ್.ಅಶೋಕ)
ಕಂದಾಯ ಸಚಿವರು

ನಂ ಎಲ್ ಎನ್ ಡಿ(2) ಎಸ್ ಆರ್ 68:99-2000

ಜಿಲ್ಲಾಧಿಕಾರಿಗಳ ಕಾರ್ಯಾಲಯ.
ಶಿವಮೊಗ್ಗ ಜಿಲ್ಲೆ: ದಿ: 2-9-99

ವಿಷಯ- ಸೊರಬ ತಾಲ್ಲೂಕು ಕುಪ್ಪಗಡ್ಡೆ ಹೋಬಳಿ. ಬಿಳ್ವದಕೊಪ್ಪ ಗ್ರಾಮದ ಸ.ನಂ.143 ರಲ್ಲಿ 3-00 ಎ. ಗು. ಪ್ರದೇಶವನ್ನು ಹಿಂದೂ ಜನಾಂಗದವರಿಗೆ ಸ್ಮಶಾನಕ್ಕೆ ಕಾಯ್ದಿರಿಸಲು ಸಲ್ಲಿಸಿರುವ ಪ್ರಸ್ತಾವನೆ.

ಉಲ್ಲೇಖ:- 1. ಸೊರಬ ತಾಲ್ಲೂಕು ತಹಶೀಲ್ದಾರ್ ರವರ ಪ್ರಸ್ತಾವನೆ ನಂಬರ್. ಭೂ ಮಂ 18:99-2000 ದಿ:18-6-99
2. ಉಪ ವಿಭಾಗಾಧಿಕಾರಿಗಳು ಸಾಗರ ಇವರ ಕ್ರಮಾಂಕ ಎಲ್ ಎನ್ ಡಿ ಸಿ ಆರ್ 166:99-2000 ದಿ:23-6-99

-----

ಪ್ರಸ್ತಾವನೆ-

ಉಲ್ಲೇಖ 1 ಮತ್ತು 2 ರ [illegible] ಬಿಳ್ವದಕೊಪ್ಪ ಗ್ರಾಮದ ಹಿಂದೂ ಜನಾಂಗದವರಿಗೆ ಸ.ನಂ.143 ರಲ್ಲಿ ಸ್ಮಶಾನಕ್ಕೆ ಜಮೀನು ಮಂಜೂರು ಮಾಡುವಂತೆ ಬಂದ ಪ್ರಸ್ತಾವನೆ ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ವೇದ್ಯವಾಗಿರುತ್ತವೆ.

ಬಿಳ್ವದಕೊಪ್ಪ ಗ್ರಾಮದ ಸ.ನಂ 143 ಒಟ್ಟು 373-34 ವಿಸ್ತೀರ್ಣವಿದ್ದು ಸರ್ಕಾರಿ ಕುಮ್ಕಿ ಖರಾಬು ಎಂದು ವರ್ಗೀಕೃತ ವಾಗಿದೆ. ಗ್ರಾಮದಲ್ಲಿ 610 ಜಾನುವಾರುಗಳಿದ್ದು ಇವುಗಳಿಗೆ ಗ್ರಾಮದಲ್ಲಿ ಸಾಕಷ್ಟು ಮೇಯಲು 13-38 ಗೋಮಾಳ ಇರುವುದಾಗಿ ತಿಳಿದು ಬರುತ್ತದೆ.

ಸದರಿ ಗ್ರಾಮದಲ್ಲಿ 350 ಜನಸಂಖ್ಯೆ ಇದ್ದು ಈ ಪೈಕಿ ಹಿಂದೂ ಜನಾಂಗಕ್ಕೆ ಸ್ಮಶಾನ ಸೌಲಭ್ಯದ ಬಗ್ಗೆ ಜಮೀನು ಕಾಯ್ದಿರಿಸಲು ಶಿಫಾರಸ್ಸು ಮಾಡಿರುತ್ತಾರೆ. ಪ್ರಸ್ತಾವಿತ ಪ್ರದೇಶವು ಯಾವುದೇ ರೀತಿಯ ಒತ್ತುವರಿ ಇಲ್ಲದೆ ಖುಲ್ಲಾ ಇರುವುದಾಗಿ ತಿಳಿದಿದ್ದು ಮತ್ತು ಸ್ಮಶಾನಕ್ಕೆ ಸೂಕ್ತವಾಗಿರುತ್ತೆಂದು ವರದಿಯಿಂದ ತಿಳಿಯುತ್ತದೆ. ಈ ವಿಚಾರದಲ್ಲಿ ಗ್ರಾಮದಲ್ಲಿ ಯಾರಿಂದಲೂ ಆಕ್ಷೇಪಣೆಗಳು ಇರುವುದಿಲ್ಲ. ಸರ್ವೆ ಸ್ಕೆಚ್ ಸಮೇತ ವರದಿ ಸಲ್ಲಿಸಿರುವುದರಿಂದ ಈ ಕೆಳಗಿನಂತೆ ಆದೇಶ.

## ಆದೇಶ.

ಮೇಲೆ ವಿವರಿಸಿರುವ ಕಾರಣಗಳಿಂದಾಗಿ. ಸೊರಬ ತಾಲ್ಲೂಕು ಬಿಳ್ವದಕೊಪ್ಪ ಗ್ರಾಮದ ಸ.ನಂ. 143 ರಲ್ಲಿ 3-00 ವಿಸ್ತೀರ್ಣವನ್ನು ಹಿಂದೂ ಜನಾಂಗದವರಿಗೆ ಸ್ಮಶಾನದ ಉದ್ದೇಶಕ್ಕಾಗಿ 1964 ರ ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 71 ರ ಅಡಿ ಕಾಯ್ದಿರಿಸಿ ಮಂಜೂರು ಮಾಡಿ ಆದೇಶಿಸಿದೆ.

ಹಾಗೂ ಸದರಿ ಜಮೀನು ಗೋಮಾಳವಾದ ಪ್ರಯುಕ್ತ 1966 ರ ಭೂ ಕಂದಾಯ ನಿಯಮಗಳ ನಿಯಮ 97(4) ರ ರೀತ್ಯಾ ಸದರಿ ವಿಸ್ತೀರ್ಣವನ್ನು ಗೋಮಾಳ ವಿಸ್ತೀರ್ಣದಿಂದ ಕಡಿಮೆಗೊಳಿಸಲು ಆದೇಶಿಸಿದೆ.

ಜಿಲ್ಲಾಧಿಕಾರಿಗಳ ಪರವಾಗಿ
ಶಿವಮೊಗ್ಗ ಜಿಲ್ಲೆ.

ಪ್ರತಿಯನ್ನು:-
1. ಉಪ ವಿಭಾಗಾಧಿಕಾರಿಗಳು. ಸಾಗರ ಉಪ ವಿಭಾಗ ಇವರಿಗೆ ಮಾಹಿತಿಗಾಗಿ.
2. ತಹಶೀಲ್ದಾರ್. ಸೊರಬ ತಾಲ್ಲೂಕು ಇವರಿಗೆ ಕಡತದೊಂದಿಗೆ ಅವಶ್ಯ ಕ್ರಮಕ್ಕಾಗಿ ರವಾನಿಸುತ್ತಾ ಗ್ರಾಮ ದಾಖಲೆಗಳಲ್ಲಿ ನಮೂದಿಸಲು ಸೂಚಿಸಿದೆ.

Scanned by CamScanner